ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1431
ಮಾನ್ಯ ಸದಸ್ಯರ ಹೆಸರು	ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	17.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಿಂದಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಅನುದಾನ ಸಹಿತವಾಗಿ ಅಥವಾ ಅನುದಾನ ರಹಿತವಾಗಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಅನುಮತಿ ನೀಡಲಾಗಿದೆಯೇ;	ಹಿಂದಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಅನುದಾನ ಸಹಿತವಾಗಿ (10 ತಿಂಗಳ ಭೋಜನಾ ವೆಚ್ಚಕ್ಕೆ ಮಾತ್ರ ಸೀಮಿತಗೊಂಡಂತೆ) ನಿಯಮಗಳನ್ವಯ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಸರ್ಕಾರದಿಂದ ಅನುಮತಿ ನೀಡಲಾಗಿರುತ್ತದೆ. ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 228 ಖಾಸಗಿ ಮೆಟ್ರಿಕ್-ಪೂರ್ವ ಮತ್ತು 24 ಖಾಸಗಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಕ್ರಮವಾಗಿ 12853 ಮತ್ತು 1179 ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಸದರಿ ವಸತಿನಿಲಯಗಳನ್ನು ಪ್ರಾರಂಭಿಸಲು ಅನುಮತಿ ನೀಡದೇ ಇರಲು ಕಾರಣಗಳೇನು;	ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಅನುದಾನದ ಕೊರತೆಯಿರುವುದರಿಂದ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ 'ಸೂಚಿಸಿದ್ದು, ಅದರಂತೆ ಖಾಸಗಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ಪೂರ್ವ / ಮಾನ್ಯತೆಗಾಗಿ ಜಿಲ್ಲೆಗಳಿಂದ ಸ್ವೀಕೃತವಾಗುವಂತಹ ಪ್ರಸ್ತಾವನೆಗಳನ್ನು ಹಿಂತಿರುಗಿಸಲು ಕ್ರಮವಹಿಸಲಾಗಿರುತ್ತದೆ.
ಇ)	ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಖಾಸಗಿಯವರಿಗೆ ಅನುಮತಿ ನೀಡದೇ ಇರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 1137 ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 122780 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಮುಂದುವರೆದು, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ ಹಿಂವಕ 352 ಬಿಎಂಎಸ್ 2019, ದಿನಾಂಕ 20.1.2020ರಲ್ಲಿ ರಾಜ್ಯದ ವಿವಿಧ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯಾಬಲ ಹೆಚ್ಚಳ ಮಾಡಲಾಗಿರುತ್ತದೆ. ಅಲ್ಲದೆ, ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/-ಗಳ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಈ)	ಬೆಳಗಾವಿ ವಿಭಾಗದಲ್ಲಿ ಕಳೆದ 02 ವರ್ಷಗಳಲ್ಲಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಎಷ್ಟು ಖಾಸಗಿ ಸಂಸ್ಥೆಗಳು ಮನವಿ ಸಲ್ಲಿಸಿದ್ದವು; ಹಾಗೂ ಸದರಿ ಸಂಸ್ಥೆಗಳಿಗೆ ಅನುಮತಿ ನೀಡದಿರಲು ಕಾರಣಗಳೇನು; ಅವುಗಳ ಸಂಪೂರ್ಣ ವಿವರ ನೀಡುವುದು;	ಬೆಳಗಾವಿ ವಿಭಾಗದಲ್ಲಿ ಕಳೆದ 2 ವರ್ಷಗಳಲ್ಲಿ 5 ಖಾಸಗಿ ಮೆಟ್ರಿಕ್-ಪೂರ್ವ ವಸತಿನಿಲಯಗಳನ್ನು ನಡೆಸಲು ಮಾನ್ಯತೆ ಪೂರ್ವ ಅನುಮತಿಗಾಗಿ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಉ)	ಇನ್ನಾದರೂ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ, ಅನುದಾನ ಸಹಿತವಾಗಿ ಅಥವಾ ಅನುದಾನ ರಹಿತವಾಗಿ ಮೆಟ್ರಿಕ್-ನಂತರದ ಮತ್ತು ಮೆಟ್ರಿಕ್-ಪೂರ್ವ ವಸತಿನಿಲಯಗಳನ್ನು ನಡೆಸಲು ಖಾಸಗಿಯವರಿಗೆ ಅನುಮತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?	ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಈಗಿನ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಇಂತಹ ಪ್ರಸ್ತಾವನೆಗಳಿಗೆ ಸಹಮತಿಸಲು ಅನುದಾನದ ಕೊರತೆಯಿರುವುದರಿಂದ ಇಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಇಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ ಆರ್ಥಿ ಇಲಾಖೆಯು ಅಭಿಪ್ರಾಯಿಸಿದೆ.

ಸಂಖ್ಯೆ:ಹಿಂವಕ 202 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ

ವಿಧಾನಪರಿಷತ್ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1431ಕ್ಕೆ

*****

ಬೆಳಗಾವಿ ವಿಭಾಗದಲ್ಲಿ ಕಳೆದ 2 ವರ್ಷಗಳಲ್ಲಿ ಖಾಸಗಿ ಮೆಟ್ರಿಕ್-ಪೂರ್ವ ವಸತಿನಿಲಯಗಳ ಮಾನ್ಯತೆ ಪೂರ್ವ ಅನುಮತಿಗಾಗಿ ಬಂದಿರುವ ಪ್ರಸ್ತಾವನೆಗಳ ವಿವರ

ಕ್ರ. ಸಂ.	ತಾಲ್ಲೂಕು	ಪ್ರಸ್ತಾವನೆಯ ವಿವರ	ಬಾಲಕ / ಬಾಲಕಿ	ಪ್ರಸ್ತಾವನೆಗಳ ವಿವಿಧ ಹಂತಗಳು
1	ಚಿಕ್ಕೋಡಿ	ಕರ್ನಾಟಕ ಮಾರ್ಡನ್ ಶಿಕ್ಷಣ ಸಂಸ್ಥೆ, ಕೇರೂರ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.	ಬಾಲಕ	ಈ ಕಛೇರಿಯ ಪತ್ರ ದಿನಾಂಕ 8.1.2020ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.
2	ಗೋಕಾಕ್	ಮಹಿಳಾ ಎಂಪವರ್-ಮೆಂಟ್ ಜನರೇಶನ್ ಅಂಡ್ ಹೆಲ್ತ್ ಅವರ್ನೆಸ್ ಸೊಸೈಟಿ, ನಾಗನೂರು ಗ್ರಾಮ, ಮೂಡಲಗಿ, ಗೋಕಾಕ್ ತಾಲ್ಲೂಕು.	ಬಾಲಕ	ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.
3	ಗೋಕಾಕ್	ಮಹಿಳಾ ಎಂಪವರ್-ಮೆಂಟ್ ಜನರೇಶನ್ ಅಂಡ್ ಹೆಲ್ತ್ ಅವರ್ನೆಸ್ ಸೊಸೈಟಿ, ನಾಗನೂರು ಗ್ರಾಮ, ಮೂಡಲಗಿ, ಗೋಕಾಕ್ ತಾಲ್ಲೂಕು.	ಬಾಲಕಿ	ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.
4	ಗೋಕಾಕ್	ಶ್ರೀ ಮಲ್ಲಿಕಾರ್ಜುನ ಇನ್ಸಿಟ್ಯೂಟ್ ಆಫ್ ಲಿಬರಲ್ ಎಜ್ಯುಕೇಷನ್ ಸೊಸೈಟಿ, ಮೂಡಲಗಿ, ಗೋಕಾಕ್ ತಾಲ್ಲೂಕು.	ಬಾಲಕ	ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.
5	ರಾಯಭಾಗ	ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ, ಅಜೂರೆ ತೋಟ, ಖಣದಾಳ, ರಾಯಭಾಗ ತಾಲ್ಲೂಕು.	ಬಾಲಕ	ಸರ್ಕಾರದ ಪತ್ರ ಸಂ.ಬಿಸಿಡಬ್ಲ್ಯೂ 207 ಬಿಎಂಎಸ್ 2019, ದಿನಾಂಕ 5.9.2020ರಲ್ಲಿ ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಅನುದಾನದ ಕೊರತೆಯಿರುವುದರಿಂದ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ ಸೂಚಿಸಿದ್ದು, ಅದರಂತೆ ಪ್ರಸ್ತಾವನೆಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ಹಿಂತಿರುಗಿಸಲಾಗಿರುತ್ತದೆ.